**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**

**ಸಿಂಧನೂರು.**

**ಸಿ.ಸಿ.ನಂ.79/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | ಹುಸೇನಪ್ಪ | | |
| ತಂದೆ:ಹೆಸರು | ಅಮರಪ್ಪ | ಪಿಡಬ್ಲೂ: | 1 |
| ವಯಸ್ಸು | 48 ವರ್ಷ | ಸಿಡಬ್ಲೂ: | 1 |
| ಉದ್ಯೋಗ: | ವ್ಯವಸಾಯ | | |
| ವಾಸ ಸ್ಥಳ: | ಸೋಮಲಾಪುರ. | | |

**ದಿನಾಂಕ 21-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ::-**

ಚಾಸಾ-2 ನನ್ನ ಹೆಂಡತಿ. ಚಾಸಾ-3 ನನ್ನ ಚಿಕ್ಕಮ್ಮ, ಚಾಸಾ-4 ನನ್ನ ಚಿಕ್ಕಪ್ಪ, ಚಾಸಾ-5 ನನ್ನ ತಮ್ಮ, ಚಾಸಾ-6 & 7 ನನ್ನ ಪರಿಚಯಸ್ಥರು, ಚಾಸಾ-8 ಹೊಲದ ಮಾಲೀಕ. ಆರೋಪಿತರು ಪರಿಚಯ ಇದ್ದಾರೆ.

ಶಂಕ್ರಯ್ಯಸ್ವಾಮಿರವರ ಹೊಲವನ್ನು ನಾನು ಗುತ್ತಿಗೆಗೆ ಮಾಡುತ್ತಿದ್ದೆ ಆರೋಪಿತರು ವೀರೇಶ್‌ರವರ ಹೊಲವನ್ನು ಗುತ್ತಿಗೆಗೆ ಮಾಡುತ್ತಿದ್ದರು. ದಿ.04-11-2022 ರಂದು ಮಧ್ಯಾಹ್ನ 12 ರಿಂದ 12-30 ಗಂಟೆ ಸುಮಾರಿಗೆ ಚಾಸಾ-8 ರವರನ್ನು ನೀರು ಕೊಡಲು ಕೇಳಿಕೊಂಡೆನು, ಅವರು ಹೋಗಿ ನೀರು ಬಿಟ್ಟುಕೊಳ್ಳಿ ಎಂದು ಹೇಳಿದರು. ನಾನು, ಚಾಸಾ-2 ರಿಂದ 5 ರವರು ಹೊಲದಲ್ಲಿ ನೀರಿನ ಪೈಪನ್ನು ಹಾಕುತ್ತಿದ್ದೆವು. ನಾನು ಹೋಗಿ ಮೋಟರನ್ನು ಆನ್ ಮಾಡಿದ್ದೆ. ಆಗ

ಸಿಡಬ್ಲೂ:1

ಆರೋಪಿತರು ಬಂದು ನೀನು  ಯಾರನ್ನು ಕೇಳಿ ನೀರನ್ನು ಬಿಟ್ಟುಕೊಂಡೆ ಎಂದು ಕೇಳಿದ್ದರು, ನಾನು ಅವರಿಗೆ ಹೊಲದ ಮಾಲೀಕರನ್ನು ಕೇಳಿದ್ದೇನೆ, ನೀವು ಅವರನ್ನು ಕೇಳಿಕೊಳ್ಳಿ ಎಂದು ಹೇಳಿದೆ. ಆಗ 1 & 2 ನೇ ಆರೋಪಿತರು ಲೇ ಸೂಳೆ ಮಗನೇ ನನಗೆ ಎದುರು ಮಾತನಾಡುತ್ತೀಯಾ ಎಂದು ಕಲ್ಲನ್ನು ತೆಗೆದುಕೊಂಡು ನನ್ನ ಎದೆಗೆ ಹೊಡೆದಿರುತ್ತಾರೆ. 4 ನೇ ಆರೋಪಿ ಕಲ್ಲನ್ನು ತೆಗೆದುಕೊಂಡು ನನ್ನ ಬೆನ್ನಿಗೆ ಗುದ್ದಿದನು, ಆಗ ನಾನು ಕಾಲುವೆಯಲ್ಲಿ ಬಿದ್ದೆನು. ಆಗ ಚಾಸಾ–4 ರವರು  ಬಿಡಿಸಲು ಬಂದಾಗ ಆತನಿಗೆ 1 & 2 ನೇ ಆರೋಪಿತರು ಅವರನ್ನೂ ಹೊಡೆದರು.  ಚಾಸಾ–3 ರವರು ಬಿಡಿಸಲು ಬಂದಾಗ 2 ನೇ ಆರೋಪಿತರು ಆಕೆಯ ಸೀರೆ ಹಿಡಿದು ಎಳೆದಾಡಿ, ಕೂದಲು ಹಿಡಿದು ಜಗ್ಗಿ ಕಿತ್ತಿರುತ್ತಾರೆ.  ನಂತರ ನನ್ನ ತಮ್ಮ ಮತ್ತು ನನ್ನ ಹೆಂಡತಿ ಸ್ಥಳಕ್ಕೆ ಬಂದಿರುತ್ತಾರೆ.  ಚಾಸಾ–2 ರವರಿಗೆ 1 ನೇ ಆರೋಪಿ ಕಪಾಳಕ್ಕೆ ಬಡೆದರು, ಚಾಸಾ–3 ರವರಿಗೆ 1 & 2 ನೇ ಆರೋಪಿತರು ಕಪಾಳಕ್ಕೆ ಬಡೆದರು.  ನಂತರ ಚಾಸಾ–6 & 7 ರವರು ಜಗಳ ಬಿಡಿಸಿದರು.  ನಂತರ ಆರೋಪಿತರು ಇವರು ಬಂದರೆಂದು ನಿಮ್ಮನ್ನು ಬಿಡುತ್ತಿದ್ದೇವೆ, ಬೋರಿನ ಸಮೀಪ ಬಂದರೆ ಜೀವ ಸಹಿತ ಉಳಿಸುವುದಿಲ್ಲ ಎಂದು ಬೆದರಿಕೆ ಹಾಕಿದರು.  ನಂತರ ನಾವು ಸಿಂಧನೂರಿನ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದೆವು.  ನಂತರ ಪೋಲೀಸ್ ಠಾಣೆಗೆ ಹೋಗಿ ದೂರು ದಾಖಲಿಸಿದೆವು.

ಸಾಕ್ಷಿಯು ದೂರನ್ನು ಮತ್ತು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ–1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ಮರುದಿನ ಪೋಲೀಸರು ಮನೆಯ ಹತ್ತಿರ ಬಂದಿದ್ದರು. ಅವರು ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿ ನನ್ನ ಸಮಕ್ಷಮ ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಚಾಸಾ–9 & 10 ರವರು ಇದ್ದರು. ಪಂಚನಾಮೆಯನ್ನು 2 ರಿಂದ 3 ಗಂಟೆಗಳ ಕಾಲ ಮಾಡಿದ್ದರು.

ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 3 ಕಲ್ಲುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ಮು. ಮಾ. 1 ರಿಂದ 3** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ಲಕ್ಷ್ಮೀದೇವಿಯ ಕಪಾಳಕ್ಕೆ ಹೊಡೆದು, ಸೀರೆ ಹಿಡಿದು ಎಳೆದಾಡಿದ್ದರು ಎಂದರೆ ಸರಿ.

**ಪಾಟೀಸವಾಲುಃ ಶ್ರೀ.ಎಸ್. ವಿ. ಪಿ. ಆರೋಪಿ ಪರ ವಕೀಲರಿಂದಃ–**

1. ನನ್ನದು ಸೋಮಲಾಪುರ ಗ್ರಾಮದಲ್ಲಿ ಸ್ವಂತ 2 ಎಕರೆ ಜಮೀನು ಇದೆ. ನನ್ನ ತಂದೆಯ ಹೆಸರಿನಲ್ಲಿ 4 ಎಕರೆ ಜಮೀನು ಇದೆ. ಈ ಎಲ್ಲಾ ಜಮೀನುಗಳನ್ನು ನಾನೇ ಉಳುಮೆ ಮಾಡುತ್ತೇನೆ. ನಮ್ಮವು ನೀರಾವರಿ ಜಮೀನು ಎಂದರೆ ಸರಿ.

2. ನಾನು ಶಂಕ್ರಯ್ಯರವರ ಜಮೀನನ್ನು 15 ವರ್ಷಗಳಿಂದ ಗುತ್ತಿಗೆ ಮಾಡುತ್ತಿದ್ದೇನೆ. ನಾನು ಅವರ ಹತ್ತಿರ ಹೊಲ ಮಾಡಲು ಲೀಸ್ ಪತ್ರ ಬರೆಸಿಕೊಂಡಿದ್ದೆ ಲೀಸ್ ಪತ್ರ ಮಾಡಿಕೊಂಡ ದಿನಾಂಕ ನನಗೆ ಈಗ ನೆನಪಿಲ್ಲ. ಆ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದರ ಹೆಸರು ನನಗೆ ಈಗ ನೆನಪಿಲ್ಲ. ಸದರಿ ಪತ್ರವನ್ನು ರಾಗಪ್ಪ ಎಂಬ ಬೆರಳಚ್ಚುಗಾರರು ತಯಾರಿಸಿದ್ದರು. ಸದರಿ ಪತ್ರವನ್ನು ದೂರಿನೊಂದಿಗೆ ಲಗತ್ತಿಸಿ ಕೊಟ್ಟಿರುವುದಿಲ್ಲ. ಪೋಲೀಸರು ಸದರಿ ಪತ್ರವನ್ನು ಕೊಡುವಂತೆ ಕೇಳಿಲ್ಲ

3. ದೂರಿನಲ್ಲಿ ಶಂಕ್ರಯ್ಯಸ್ವಾಮಿರವರ ಹೊಲದ ಸರ್ವೆ ನಂಬರ್, ಎಷ್ಟು ಎಕರೆ, ಯಾವ ಹೋಬಳಿ, ಯಾವ ತಾಲ್ಲೂಕಿನಲ್ಲಿದೆ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿದೆ ಎನ್ನುತ್ತಾರೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ಸದರಿ ವಿಚಾರವನ್ನು ನಾನು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ.

4. ನನಗೆ ಓದಲು ಬರೆಯಲು ಅಲ್ಪ ಸ್ವಲ್ಪ ಬರುತ್ತದೆ.

5. ವೀರೇಶ್ ಬೋವಿರವರ ಹೊಲವನ್ನು 1 ನೇ ಆರೋಪಿ ಗುತ್ತಿಗೆಗೆ ಉಳುಮೆ ಮಾಡುತ್ತಿದ್ದನು. ಸದರಿ ಹೊಲದ ಸರ್ವೆ ನಂಬರ್, ಎಷ್ಟು ಎಕರೆ, ಯಾವ ಹೋಬಳಿ, ಯಾವ ತಾಲ್ಲೂಕಿನಲ್ಲಿದೆ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿಲ್ಲ ಎನ್ನುತ್ತಾರೆ. ಶಂಕ್ರಯ್ಯರವರ ಹೊಲದ ಪಹಣಿಯನ್ನು ನಾನು ದೂರಿನೊಂದಿಗೆ ಲಗತ್ತಿಸಿರುವುದಿಲ್ಲ. ಪೋಲೀಸರು ನನ್ನನ್ನು ಪಹಣಿ ಪತ್ರಿಕೆ ಕೊಡುವಂತೆ ಕೇಳಿಲ್ಲ.

6. ಒಂದು ವೇಳೆ ಲೀಸನ್ನು ಮಾಡಿದ್ದರೆ ಪಹಣಿ ಪತ್ರಿಕೆಯಲ್ಲಿ ಲೀಸ್ ಅಂತಾ ನಮೂದಾಗುತ್ತದೆ ಎಂದರೆ ಸರಿ. ಲೀಸ್ ಮಾಡಿದವರ ಹೆಸರೂ ಸಹ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕರಾರು ಪತ್ರ ಮಾಡಿಕೊಂಡರೆ ಮಾತ್ರ ಆ ರೀತಿ ಬರುತ್ತಧೆ ಲೀಸ್

ಮಾಡಿ ಕೊಟ್ಟರೆ ಆ ರೀತಿ ಬರುವುದಿಲ್ಲ ಎನ್ನುತ್ತಾರೆ. ಲೀಸ್ ಮಾಡಿಕೊಟ್ಟರೂ ಸಹ ಆ ರೀತಿ ಬರುತ್ತದೆ ಎಂದರೆ ಸರಿಯಲ್ಲ. ನಾನು ಶಂಕ್ರಯ್ಯರವರಿಂದ ಯಾವುದೇ ಲೀಸ್ ಮಾಡಿಕೊಂಡಿಲ್ಲ ಆದ್ದರಿಂದ ಆ ಲೀಸ್ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ವೀರೇಶ್‌ರವರ ಹೊಲದಲ್ಲಿ ಬೋರ್‌ವೆಲ್ ಇದೆ ಎಂದರೆ ಸರಿ. ಯಾರು ಹೊಲವನ್ನು ಗುತ್ತಿಗೆ ಮಾಡುತ್ತಾರೋ ಅವರಿಗೆ ಮಾತ್ರ ಆ ಜಮೀನಿನ ಅಧಿಕಾರ ಇರುತ್ತದೆ ಎಂದರೆ ಸರಿ. 1 ನೇ ಆರೋಪಿ ವೀರೇಶ್‌ರವರ ಹೊಲವನ್ನು ಒಂದು ಬೆಳೆ ಮಾತ್ರ ಗುತ್ತಿಗೆ ಮಾಡಿರುತ್ತಾರೆ ಆ ಹೊಲದಲ್ಲಿ ಆತ ನೆಲ್ಲು ಬೆಳೆಯುತ್ತಿದ್ದ ಎಂದರೆ ಸರಿ. ಹಾಗಾಗಿ 1 ನೇ ಆರೋಪಿಗೆ ಮಾತ್ರ ಆ ಹೊಲದಲ್ಲಿ ನೀರು ಹರಿಸಿಕೊಳ್ಳಲು ಅಧಿಕಾರ ಇದೆ, ನಿಮಗೆ ಅಧಿಕಾರ ಇಲ್ಲ ಎಂದರೆ ಸರಿ. ನಾನು ವೀರೇಶ್‌ರವರೊಂದಿಗೆ ಹೊಲದ ನೀರನ್ನು ಬಿಡಬೇಕೆಂದು ಯಾವುದೇ ಒಪ್ಪಿಗೆ ಪತ್ರ ಮಾಡಿಸಿಕೊಂಡಿರಲಿಲ್ಲ.

8. ದಿ.04-11-2022 ರಂದು ಬೆಳಿಗ್ಗೆ 8 ಗಂಟೆಗೆ ನೀರು ಬಿಡುವಂತೆ ವೀರೇಶ್‌ರವರಿಗೆ ಕೇಳಿದ್ದೆ. ಆ ಕಾಲಕ್ಕೆ ಆತನ ಮನೆಯಲ್ಲಿ ಗಂಡ ಹೆಂಡತಿ ಇದ್ದರು. ನಾನೊಬ್ಬನೇ ಕೇಳಲು ಹೋಗಿದ್ದೆ. ನಾವು 5 ನಿಮಿಷಗಳಕಾಲ ಮಾತನಾಡಿದ್ದೆವು.

9. ವೀರೇಶ್‌ರವರು ನಾನು ಹೊಲವನ್ನು 1 ನೇ ಆರೋಪಿಗೆ ಗುತ್ತಿಗೆಗೆ ಕೊಟ್ಟಿದ್ದೇನೆ, ಆತನಿಗೆ ಹೋಗಿ ಕೇಳು ಅಂತಾ ನನಗೆ ಹೇಳಿರಲಿಲ್ಲ. ವೀರೇಶ್‌ರವರ ಹೊಲವನ್ನು 1 ನೇ ಆರೋಪಿ ಮಾಡುತ್ತಿದ್ದ ಎಂದು ನನಗೆ ಗೊತ್ತಿತ್ತು. ನಾನು 1 ನೇ ಆರೋಪಿಯನ್ನು ನೀರು ಬಿಡುವಂತೆ ಕೇಳಿರಲಿಲ್ಲ.

ಸಿಡಬ್ಲೂ:1

10. ಒಬ್ಬರ ಹೊಲದಲ್ಲಿ ಕಾಲು ಇಡುವುದು ಮತ್ತು ಪಂಪ್‌ಸೆಟ್ ನೀರು ತೆಗೆದುಕೊಳ್ಳುವುದು ಅಪರಾಧ ಎಂದರೆ ಸರಿ. ಆ ರೀತಿ ನೀವು 1 ನೇ ಆರೋಪಿಯ ಹೊಲಕ್ಕೆ ಹೋಗಿ ಆ ರೀತಿ ಮೋಟರ್ ಆನ್ ಮಾಡಿರುವುದು ಕಾನೂನು ರೀತ್ಯ ಅಪರಾಧ ಎಂದರೆ ಸಾಕ್ಷಿಯು ನಾನು ಮಾಲೀಕರನ್ನು ಕೇಳಿದ್ದೆ ಆದ್ದರಿಂದ ಹೋಗಿ ಆನ್ ಮಾಡಿದ್ದೆ ಎನ್ನುತ್ತಾರೆ.

11. ನಾನು ವೀರೇಶ್‌ರವರನ್ನು ಎಂದೂ ನೀರು ಬಿಡುವಂತೆ ಕೇಳಿಲ್ಲ, ಅವರು ನನಗೆ ನೀರು ತೆಗೆದುಕೊಳ್ಳುವಂತೆ ಹೇಳಿಲ್ಲ ಎಂದರೆ ಸರಿಯಲ್ಲ.

12. ವೀರೇಶ್ ಮತ್ತು ಶಂಕ್ರಯ್ಯಸ್ವಾಮಿರವರ ಹೊಲಗಳು ಊರಿನಿಂದ ದಕ್ಷಿಣ ದಿಕ್ಕಿಗೆ ಇದೆ. ಊರಿನಿಂದ ಸದರಿ ಹೊಲಗಳು 2 ಕಿ. ಮೀ. ದೂರದಲ್ಲಿ ಇವೆ.

13. ನಾನು, ಚಾಸಾ–2 ರಿಂದ 5 ರವರು ಒಟ್ಟಿಗೆ ನೀರು ಹರಿಸಿಕೊಳ್ಳಲು ಹೋಗಿದ್ದೆವು ಎಂದು ನಿಪಿ–1 ರಲ್ಲಿ ಬರೆಸಿಲ್ಲ ಎಂದರೆ ಸರಿ. ವೀರೇಶ್‌ರವರ ಹೊಲದಲ್ಲಿ ಹೋಗಿ ಪಂಪ್‌ಸೆಟ್ ಆನ್ ಮಾಡಿದಾಗ ಮಧ್ಯಾಹ್ನ 12 ಗಂಟೆಯಾಗಿತ್ತು.

14. ನೀರು ಹರಿಸಲು ಪೈಪ್ ನ್ನು ತೆಗೆದುಕೊಂಡು ಹೋಗಿದ್ದೆ ಎಂದು ನನ್ನ ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ. ನಾನು ವೀರೇಶ್‌ರವರ ಹೊಲದಲ್ಲಿ 5 ನಿಮಿಷದ ಕಾಲ ಇದ್ದೆ. ವೀರೇಶ್ ಮತ್ತು ಶಂಕ್ರಯ್ಯಸ್ವಾಮಿರವರ ಹೊಲಗಳ ಅಕ್ಕ ಪಕ್ಕ ನಮ್ಮ ಹೊಲ ಇದೆ ಸದರಿ ಹೊಲ ಶಂಕ್ರಯ್ಯರವರ ಹೊಲದ ಪೂರ್ವಕ್ಕೆ ಹತ್ತಿಕೊಂಡಿದೆ ಆ ಹೊಲದಲ್ಲಿ ಬೋರ್‌ವೆಲ್ ಇದೆ. ವೀರೇಶ್ ಮತ್ತು ಶಂಕ್ರಯ್ಯಸ್ವಾಮಿರವರ ಹೊಲದ ಪಕ್ಕದಲ್ಲಿ ಕಾಲುವೆ ಹರಿದಿದೆ ಎಂದರೆ ಸರಿ ನಾನು ಶಂಕ್ರಯ್ಯಸ್ವಾಮಿರವರ ಹೊಲದ ಅಕ್ಕಪಕ್ಕದಲ್ಲಿರುವ ನನ್ನ ಹೊಲದಿಂದಲೂ ಸಹ ನೀರನ್ನು ಹರಿಸಿಕೊಳ್ಳುತ್ತೇನೆ. ನನ್ನ ಹೊಲದಲ್ಲಿ ಬೋರ್‌ವೆಲ್ ಇರುವುದರಿಂದ ವೀರೇಶ್‌ರವರ ಹೊಲದಿಂದ

ನೀರನ್ನು ಹರಿಸಿಕೊಳ್ಳುವ ಪ್ರಮೇಯ ಬರುವುದಿಲ್ಲ ಎಂದರೆ ಸಾಕ್ಷಿಯು 500 ಫೀಟ್ ಪೈಪ್ ಹಾಕಬೇಕಾಗುತ್ತದೆ, ಆದ್ದರಿಂದ ಅದು ದೂರ ಆಗುತ್ತದೆ ಎಂದು ಹೇಳಿ ವೀರೇಶ್‌ರವರ ಹೊಲದಿಂದ ನೀರು ಕೇಳಿದ್ದೆ ಎನ್ನುತ್ತಾರೆ. ನಾನು ಹೇಳುವಂತೆ ವೀರೇಶ್‌ರವರ ಹೊಲದಿಂದ ನೀರು ಪಡೆಯುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ.

15. ಕಾಲುವೆಯಿಂದಲೂ ನೀವು ನೀರು ಹರಿಸಿಕೊಳ್ಳುತ್ತಿದ್ದೀರಿ ಎಂದರೆ ಸಾಕ್ಷಿಯು ಭತ್ತ ಬಂದಾಗ ನಮಗೂ ಸಹ ನೀರು ಬಿಡುವುದಿಲ್ಲ ಎನ್ನುತ್ತಾರೆ. ಯಾರು ಬಿಡುವುದಿಲ್ಲ ಎಂದರೆ ಸಾಕ್ಷಿಯು ಹನುಮಂತ, ಬಾಲಪ್ಪ, ಬಸಪ್ಪರವರು ಬಿಡುವುದಿಲ್ಲ ಎನ್ನುತ್ತಾರೆ. ಆರೋಪಿತರು ನೀರನ್ನು ಬಿಡುವುದಿಲ್ಲ ಎಂದು ಹೇಳಿ ಅವರ ವಿರುದ್ಧ ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಕೊಟ್ಟಿಲ್ಲ ಎನ್ನುತ್ತಾರೆ. ಅದೇ ರೀತಿಯಾಗಿ ಆರೋಪಿತರ ವಿರುದ್ಧ ನೀರಾವರಿ ಇಲಾಖೆಯವರಿಗೆ ದೂರು ಕೊಟ್ಟಿಲ್ಲ. ನಮ್ಮ ಊರಿನ ಮುಖಂಡರಿಗೆ ಹೇಳಿ ಕೆನಾಲ್ ನೀರು ಕೊಡುತ್ತಿಲ್ಲ ಎಂದು ಪಂಚಾಯಿತಿ ಮಾಡಿಲ್ಲ.

**ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

2 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.